## ಮರಸೇಬು ಡ್ರೈ ಚಾಟ್



ಏನೇನು ಬೇಕು?

ಸಣ್ಣದಾಗಿ ಕತ್ತರಿಸಿದ ಮರಸೇಬು ಒಂದು ಕಪ್
ಬೀಜರಹಿತ ಸೀಬೆ ಹಣ್ಣಿನ ತಿರುಳು ಅರ್ಧ ಕಪ್
ದಾಳಿಂಬೆ ಬೀಜ ಅರ್ಧ ಕಪ್
ಚಿಟಿಕೆ ಜೀರಿಗೆ ಪುಡಿ, ಉಪ್ಪು

ಮಾಡೋದು ಹೇಗೆ?

ಮಿಕ್ಸಿಂಗ್ ಬೌಲ್‌ನಲ್ಲಿ ಹಣ್ಣುಗಳನ್ನು ಹಾಕಿ ಚಿಟಿಕೆ ಜೀರಿಗೆ, ಸ್ವಲ್ಪ ಉಪ್ಪು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ.



## ಮರಸೇಬು ಚಟ್ನಿ

ಏನೇನು ಬೇಕು?

ಸಿಪ್ಪೆ ತೆಗೆದ ಮರಸೇಬಿನ ತುರಿ ಒಂದು ಕಪ್
ಕಾಯಿತುರಿ ಅರ್ಧ ಕಪ್ / ಹುರಿಗಡಲೆ ಒಂದು ಚಮಚ
ಹಸಿಮೆಣಸಿನಕಾಯಿ ಐದು / ರುಚಿಗೆ ತಕ್ಕಷ್ಟು ಉಪ್ಪು

ಮಾಡೋದು ಹೇಗೆ?

ಮೇಲೆ ಹೇಳಿದ ಎಲ್ಲ ಪದಾರ್ಥಗಳನ್ನೂ ನುಣ್ಣಗೆ ರುಬ್ಬಿ ಸಾಸಿವೆ, ಇಂಗಿನ ಒಗ್ಗರಣೆ ಕೊಡಿ.



## ಮರಸೇಬು- ಆಲೂ ಮಸಾಲ

ಏನೇನು ಬೇಕು?

ಮರಸೇಬಿನ ತುರಿ ಅರ್ಧ ಕಪ್
ಬೇಯಿಸಿದ ಆಲೂಗಡ್ಡೆ ಒಂದು
ಟೊಮ್ಯಾಟೊ ಒಂದು
ಕೊತ್ತಂಬರಿಸೊಪ್ಪು ಸ್ವಲ್ಪ
ರುಚಿಗೆ ತಕ್ಕಷ್ಟು ಚಾಟ್ ಮಸಾಲ, ಉಪ್ಪು

ಮಾಡೋದು ಹೇಗೆ?

ಆಲೂಗಡ್ಡೆಯ ಸಿಪ್ಪೆತೆಗೆದು ಪುಡಿಯಾಗುವಂತೆ ಹಿಚುಕಿಕೊಳ್ಳಿ, ಟೊಮ್ಯಾಟೊವನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ ಮಿಕ್ಸಿಂಗ್ ಬೌಲ್‌ನಲ್ಲಿ ಆಲೂ, ಟೊಮ್ಯಾಟೊ, ಮರಸೇಬಿನ ತುರಿ, ಚಾಟ್ ಮಸಾಲ, ಉಪ್ಪು ಸೇರಿಸಿ ಮಿಶ್ರಣ ಮಾಡಿ, ನಂತರ ಕೊತ್ತಂಬರಿ ಸೊಪ್ಪನ್ನು ಉದುರಿಸಿ.